ಅಜ್ಜಿ ಅವನ ಕರುಣ ಕಥೆ ಹೇಳಿದಳು:

ಗುಡಿಸಲಿಗೆ ಬೆಂಕಿ ಬಿತ್ತು. ತಾಯಿತಂದೆಯರು ಬೆಂಕಿಗೆ ಆಹುತಿಯಾದರು. ಆದರೆ ಈ ಮಗು ಬದುಕಬೇಕಿತ್ತು. ಸಾಯುತ್ತಿರುವ ತಾಯಿ ತನ್ನ ಉಳಿದ ಶಕ್ತಿಯನ್ನೆಲ್ಲ ಉಪಯೋಗಿಸಿ ಉರಿಯುತ್ತಿರುವ ಬಾಲಕನನ್ನು ಮನೆಯಿಂದ ಹೊರಗೆ ಬಿಸಾಕಿದಳು—ಒಂದು ಆರಿ ಹೋಗುತ್ತಿರುವ ಹಣತೆ ಮತ್ತೊಂದು ಹಣತೆಯನ್ನು ಹೊತ್ತಿಸುವಂತೆ.

ಹೇಗೋ ಬದುಕಿ ಉಳಿದ ಚೇತನನನ್ನು ಗ್ರಾಮದ ವೈದ್ಯರು ಬೆಂಗಳೂರು ಆಸ್ಪತ್ರೆಗೆ ಸೇರಿಸಿದರು. ಅಲ್ಲಿ ಅವನು ಅನೇಕ ತಿಂಗಳುಗಳು ಇರಬೇಕಾಯಿತು. ಆದರೆ ಅಲ್ಲಿಯ ಖರ್ಚನ್ನು ನಿಭಾಯಿಸುವವರಾರು? ಆ ಬಡ ಅಜ್ಜಿ ಅಸಹಾಯಕಳಾದಳು. ಕೊನೆಗೆ ಆಕೆಗೆ ಈ ಅನಾಥಾಶ್ರಮದ ಬಗ್ಗೆ ತಿಳಿಯಿತು. ಇಲ್ಲಿಗೆ ಅವನನ್ನು ಕರೆದುಕೊಂಡುಬಂದಳು.

ಇಲ್ಲಿಗೆ ಬಂದಮೇಲೆ ಬಾಲಕನ ಭಾಗ್ಯ ಕುದುರಿತು. ಅವನ ತಾಯಿತಂದೆಯರಾಗಲಿ, ಆಶ್ರಮವಾಸಿಗಳಾಗಲಿ ಅವನಿಗೆ ಅಷ್ಟೊಂದು ಸಹಾಯ ಒದಗಿಸಲಾಗುತ್ತಿರಲಿಲ್ಲ—ಅಷ್ಟರಮಟ್ಟಿಗೆ ಅವನಿಗೆ ಸಹಾಯ ಎಲ್ಲ ಕಡೆಯಿಂದ ಬಂದಿತು, ಬರುತ್ತಿದೆ.

ಮೈಸೂರು ಹೆರಿಟೇಜ್ ರೌಂಡ್ ಟೇಬಲ್‌ನ ಚೇರ್‌ಮನ್, ಪರಮಜಿತ್ ಸಿಂಗ್; ಇನ್ನರ್ ವ್ಹೀಲ್ ಕ್ಲಬ್ ಅಧ್ಯಕ್ಷರಾದ ಅಮೃತಾಜಿ ಇನ್ನೂ ಮುಂತಾದವರು ಧನಸಹಾಯ ಮಾಡಿದರು. ಪ್ರಸಿದ್ಧ ಪ್ಲಾಸ್ಟಿಕ್ ಸರ್ಜನ್ ಡಾ. ಜಯರಾಂ ಮೇಜರ್ ಆಪರೇಷನ್ ಉಚಿತವಾಗಿ ಮಾಡಿದರು. ಮತ್ತು ಇನ್ನೂ ಮಾಡುವವರಿದ್ದಾರೆ. ಮಿಷನ್ ಆಸ್ಪತ್ರೆಯಲ್ಲಿ ಎಂಟು ಹತ್ತು ದಿನಗಳನ್ನು ಆ ಬಾಲಕ ಕಳೆದನು. ಒಂದು ತಿಂಗಳು ಅವನು ಹಾಸಿಗೆಯಲ್ಲಿಯೇ ಮಲಗಿ ವಿಶ್ರಾಂತಿ ಪಡೆದನು. ಆಗ ಅನಾಥಾಶ್ರಮದವರು ಅವನ ಶುಶ್ರೂಷೆ ಮಾಡಿದರು.

ಇಂದು ಈ ಚೇತನ್ ಇತರ ಮಕ್ಕಳೊಡನೆ ಶಾಲೆಗೆ ಹೋಗುತ್ತಿದ್ದಾನೆ. ಅವನು ಮೊದಲನೆ ತರಗತಿಯಲ್ಲಿ ಓದುತ್ತಿದ್ದಾನೆ. ಎಡಗೈಯಲ್ಲಿ ಅವನು ಎಷ್ಟು ಸುಂದರವಾಗಿ ಬರೆಯುತ್ತಾನೆ! ಕಲಿಯುವುದರಲ್ಲಿ ಆತ ತುಂಬ ಚುರುಕು. ಕಣ್ಣಿನಲ್ಲಿ ತೇಜಸ್ಸಿದೆ, ಬುದ್ಧಿ ಪ್ರಖರ. ಮುಖದ ಚಹರೆ ಕ್ರಮೇಣ ಬದಲಾಗುತ್ತಿದೆ.

ಈಗ ನೀವು ಹೇಳಿ, ಅವನನ್ನು ಯಾರು ನೋಡಿಕೊಳ್ಳುತ್ತಿರುವರು? ಇಷ್ಟು ಜನರ ಮನಸ್ಸಿನಲ್ಲಿ ಈ ಬಾಲಕನ ವಿಷಯದಲ್ಲಿ ದಯೆ ಇರಿಸಿದವರು ಯಾರು? ನಾವು ಕೇವಲ ನೋಡಿಕೊಳ್ಳುತ್ತೇವೆ—ಮಾಲಿ ತೋಟ ನೋಡಿಕೊಳ್ಳುವಂತೆ. ಆದರೆ ಮಾಲಿಕ ಬೇರೇ ಇರುವವನು. ನಾವು ಕೇವಲ ನಿಮಿತ್ತ ಮಾತ್ರ, ಅಷ್ಟೆ.

# ಪ್ರಹಸನ ಪ್ರಸಂಗ

**ನಾವು** ಜಗತ್ತನ್ನು ತಿದ್ದಲು ಹೋಗುವಾಗ ಎಚ್ಚರಿಕೆಯಿಂದಿರಬೇಕಾಗುತ್ತದೆ. ಇತರರನ್ನು ಸರಿಪಡಿಸುವ ಭರದಲ್ಲಿ ನಮ್ಮ ನೆಲೆ ತಪ್ಪಿ ನಾವೇ ಕಷ್ಟಕ್ಕೆ ಈಡಾಗಬಹುದು. ಆದ್ದರಿಂದ ನಮ್ಮ ನೆಲೆಯಲ್ಲಿ ನಾವು ಸ್ಥಿರವಾಗಿ ನಿಂತು ಇನ್ನೊಬ್ಬರಿಗೆ ಸಹಾಯ ಹಸ್ತ ನೀಡಬೇಕು.

ಒಂದು ಮನೆ. ಆ ಮನೆಯ ಹಿತ್ತಲಿನಲ್ಲಿ ಇದ್ದ ಒಂದು ಮರದ ಮೇಲೆ ಒಂದು ಗೊರಿಲ್ಲ ಕುಳಿತುಕೊಂಡಿತ್ತು. ಮನೆಯ ಯಜಮಾನನು ಅದನ್ನು ನೋಡಿ ಭಯಗೊಂಡನು. ಕೂಡಲೆ ಪೊಲೀಸ್ ಠಾಣೆಗೆ ವಿಷಯ ತಿಳಿಸಿದನು. ಪೊಲೀಸನೊಬ್ಬನು ಕೈಕೋಳಗ, ಒಂದು ಕೋವಿ ಮತ್ತು ಒಂದು ನಾಯಿಯೊಡನೆ ಬಂದನು.

ಅವನು ಮನೆಯ ಯಜಮಾನನಿಗೆ ಈ ರೀತಿ ಸಲಹೆ ಇತ್ತ:

'ನೋಡಿ, ಮರ ಹತ್ತಿ ಗೊರಿಲ್ಲವನ್ನು ಕೋಲಿನಿಂದ ಕುಕ್ಕುತ್ತೇನೆ. ಅದು ಕೆಳಗೆ ದಪ್ ಎಂದು ಬೀಳುತ್ತದೆ. ತಕ್ಷಣ ನಾಯಿ ಬೊಗಳುತ್ತ ಅದರ ಕಡೆ ಧಾವಿಸುತ್ತದೆ. ಆಗ ಗೊರಿಲ್ಲ ತನ್ನನ್ನು ರಕ್ಷಿಸಿಕೊಳ್ಳಲು ತನ್ನ ಎರಡೂ ಕೈಗಳನ್ನು ಮುಂದೆ ಚಾಚುತ್ತದೆ. ಆಗ ನೀವು ಕೈಕೋಳಗವನ್ನು ಅದಕ್ಕೆ ಹಾಕಿಬಿಡಿ.'

'ಈ ಕೋವಿ ಏತಕ್ಕೆ? ' ಯಜಮಾನ ಕೇಳಿದ.

ಪೊಲೀಸ್: 'ಗೊರಿಲ್ಲ ಬೀಳುವುದಕ್ಕೆ ಮುಂಚೆ ನಾನೇ ಎಲ್ಲಾದರೂ ಬಿದ್ದುಬಿಟ್ಟರೆ, ಕೂಡಲೆ ನಾಯಿಗೆ ಗುಂಡು ಹಾರಿಸಿ.'

**ಮೊದಲು** ಜ್ಞಾನ, ಅನಂತರ ಕ್ರಿಯೆ . ನಾವು ಯಾವುದೇ ಕಾರ್ಯದಲ್ಲಿ ತೊಡಗಬೇಕಾದರೂ ಅದರ ಪೂರ್ಣ ಮಾಹಿತಿಯನ್ನು ತಿಳಿದು ಅನಂತರ ಕಾರ್ಯನಿರತರಾಗಬೇಕು. ಇಲ್ಲದಿದ್ದರೆ ನಾವು ಮೂರ್ಖರಾಗುವ ಸಂಭವ ಹೆಚ್ಚು.

ಒಂದು ನದಿಯಲ್ಲಿ ಬೆಸ್ತನು ಮೀನು ಹಿಡಿಯುತ್ತಿದ್ದನು. ಅವನೊಂದು ಹೊಸ ವಿಧಾನವನ್ನು ಅನುಸರಿಸುತ್ತಿದ್ದ. ಅವನ ಕೈಯಲ್ಲಿ ಒಂದು ಕನ್ನಡಿಯಿತ್ತು, ಇನ್ನೊಂದು ಕೈಯಲ್ಲಿ ಕೈಬಲೆ ಇತ್ತು. ವ್ಯಕ್ತಿಯೊಬ್ಬನು ಆ ಮಾರ್ಗವಾಗಿ ಬಂದನು.

'ಮೀನು ಹಿಡಿಯುವ ಈ ಹೊಸ ಉಪಕರಣಕ್ಕೆ ಎಷ್ಟು'ಎಂದು ಕೇಳಿದನು. 'ನೂರು ರೂಪಾಯಿ' ಎಂದನು ಮೀನುಗಾರ.

ಆ ವ್ಯಕ್ತಿಯು ಬೆಸ್ತನಿಗೆ ನೂರು ರೂಪಾಯಿ ಕೊಟ್ಟು ವಿವರಣೆಯನ್ನು ಕೇಳಿದನು.

ಬೆಸ್ತನು ಹೇಳಿದ : 'ಇದು ಬಹಳ ಸುಲಭ. ಈ ಕನ್ನಡಿಯನ್ನು ನೀರಿಗೆ ಹಿಡಿಯಿರಿ. ಸೂರ್ಯನ ಬೆಳಕು ಅದರ ಮೂಲಕ ಪ್ರತಿಬಿಂಬಿತವಾಗಿ ಮೀನುಗಳು ಅತ್ತ ಧಾವಿಸಿ ಬರುತ್ತವೆ. ಅನಂತರ ಈ ಕೈಬಲೆಯನ್ನು ಹಾಕಿ ಮೀನನ್ನು ಹಿಡಿಯುವುದು.'

'ಈ ರೀತಿ ನೀನು ಎಷ್ಟು ಮೀನುಗಳನ್ನು ಹಿಡಿದಿರುವೆ?'

'ನೀನು ಐದನೆಯವನು' ಬೆಸ್ತನೆಂದ.